ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

''ಗೌರವ ನೇ ಇಸವಿಯ ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡಬೇಕು''...

ಪ್ರಸ್ತಾವ ಅಂಗೀಕೃತವಾಗಿದೆ ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ೧೯೮೬ನೇ ಇಸವಿಯ ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ವಿಧೇಯಕಗಳನ್ನು ಮಂಡಿಸುವಾಗ ಪ್ರಾಸ್ತಾವಿಕವಾಗಿ ಅದಕ್ಕೆ ಅನುಕೂಲಕರವಾದ ಮಾತುಗಳನ್ನು ಸಂಬಂಧಿಸಿದ ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು.—ತಾವು ಮಂತ್ರಿಯಾಗಿರುವಾಗ, ನಾವು ಮಂತ್ರಿಯಾಗಿದ್ದಾಗ ಇದೇ ಕನ್‌ವೆನ್‌ಷನ್ ಇತ್ತು. ಈಗಲೂ ಇದೇ ಇದೆ.

ಶ್ರೀ ಕೆ ಎಚ್. ಪಾಟೀಲ್.—ಕ್ಲಾರಿಫಿಕೇಷನ್ ಯಾವಾಗ ಕೇಳುವುದು ? ಸಂಬಂಧಪಟ್ಟ ಮಂತ್ರಿಗಳಿಲ್ಲದೇ ಇದ್ದರೆ ಹೇಗೆ ಕೇಳುವುದು ?

ಅಧ್ಯಕ್ಷರು.—ಇದು ಇಂಟ್ರೊಡಕ್ಷನ್. ಮುಂದೆ ಚರ್ಚೆಗೆ ಬರುತ್ತದೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ದಯವಿಟ್ಟು ಈ ಗಮನ ಸೆಳೆಯುವ ಸೂಚನೆಯನ್ನು ಸೋಮವಾರ ತೆಗೆದುಕೊಳ್ಳಿ.

ಅಧ್ಯಕ್ಷರು.—ಆಗಲಿ.

334 ನೇ ನಿಯಮದ ಮೇರೆಗೆ

(೧) ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರುಗಳನ್ನು ತಾಲ್ಲೂಕಿನಿಂದ ತಾಲ್ಲೂಕಿಗೆ ವರ್ಗಾಯಿಸುತ್ತಿರುವುದು.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಇಲ್ಲಿಲ್ಲ. ಇದಕ್ಕಿಂತ ಮೊದಲು ಕಳುಹಿಸಿದ ಸೂಚನೆಗಳಿಗೆ ಉತ್ತರವೇ ಬರಲಿಲ್ಲ.

ಅಧ್ಯಕ್ಷರು.—ಕೊಡಿಸೋಣ ತೆಗೆದುಕೊಳ್ಳಿ.

ಶ್ರೀ ಬಿ. ಎಂ. ಇದಿನಬ್ಬ.—ಪ್ರಾಥಮಿಕ ಶಾಲೆಗಳ ಅಧ್ಯಾಪಕರುಗಳನ್ನು ಅವರಿದ್ದ ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ವರ್ಗಾಯಿಸುತ್ತಾ ಇರುವುದರಿಂದ ಅನೇಕ ಅಧ್ಯಾಪಕರಿಗೆ ತುಂಬಾ ತೊಂದರೆಯಾಗಿರುತ್ತದೆ. ಬೇರೆ ತಾಲ್ಲೂಕುಗಳಲ್ಲಿ ಅಧ್ಯಾಪಕರಿಗೆ ವಸತಿ ಸೌಕರ್ಯ ಸರಿಯಾಗಿ ದೊರೆಯದೆ ಆರ್ಥಿಕ ತೊಂದರೆಗಳಿಗೂ ಒಳಗಾಗಿರುತ್ತಾರೆ. ಇದರಿಂದ ವಿದ್ಯಾಭ್ಯಾಸದ ವಿಚಾರ ಕೂಡ ತುಂಬಾ ಶಿಥಿಲವಾಗಲು ಸಾಧ್ಯತೆ ಇದೆ. ವರ್ಗಾವಣೆಯನ್ನು ತಾಲ್ಲೂಕಿನ ಒಳಗೇ ಮಾಡುವುದರಿಂದ ವಿದ್ಯಾಮಟ್ಟ ಉತ್ತಮವಾಗಲು ಏಡೆಯಿದೆ. ಒಂದು ವೇಳೆ ಅಪಾದನೆಗೆ ಒಳಗಾದವರನ್ನು ರಾಜಕೀಯ ಮಾಡುವವರನ್ನು, ತಕ್ಷೀರಿಗೆ ಒಳಗಾದವರನ್ನು ಬೇರೆ ತಾಲ್ಲೂಕಿಗೆ ವರ್ಗ ಮಾಡುವುದನ್ನು ಒಪ್ಪಿಕೊಳ್ಳಬಹುದು ಆದರೆ ಎಲ್ಲಾ ಅಧ್ಯಾಪಕರೂ ಅಂಥವರಲ್ಲ. ಆದಕಾರಣ ಅಪಾದನೆ ಇಲ್ಲದ ಅಧ್ಯಾಪಕರ ಬಗ್ಗೆ ತಮ್ಮ ಸಹಾನುಭೂತಿ ಅಗತ್ಯ. ಈ ಕಾರಿತು ಪ್ರಾಥಮಿಕ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಸರ್ಕಾರ ಬಹುಶಃ ಹೆಚ್ಚುಕಡಿಮೆ ಇದರ ಬಗ್ಗೆ ನಿರ್ಧಾರ ಮಾಡಿದೆ. ಒಂದು ತಾಲ್ಲೂಕಿನವರನ್ನು ಇನ್ನೊಂದು ತಾಲ್ಲೂಕಿಗೆ ಹಾಕಬೇಕೆಂದು ಕಾರ